"ಹಲೋ ಸಂಜನಾ... ನಾನು ಶಶಿ."

ಬೆಳಗ್ಗೆಯಿಂದ ಕೆಲಸದ ಒತ್ತಡದಲ್ಲಿದ್ದ ಸಂಜನಾಗೆ ಊಟದ ಬಿಡುವಿನಲ್ಲಿ ಬಂದ ಮೊಬೈಲ್ ಕರೆಯೊಂದು ವಿಚಲಿತಳನ್ನಾಗಿ ಮಾಡಿತ್ತು. ಅದು ಆರು ವರ್ಷಗಳ ಹಿಂದೆ ತನ್ನಿಂದ ಬೇರೆಯಾಗಿದ್ದ ಶಶಿಧರನ ಕರೆಯಾಗಿತ್ತು. ಕಚೇರಿ ಕೆಲಸಕ್ಕೆ ಸಂಬಂಧಿಸಿದ ಕರೆಗಳನ್ನಷ್ಟೇ ಸ್ವೀಕರಿಸುತ್ತಿದ್ದ ಸಂಜನಾಳಿಗೆ ಈ ಒಂದು ವೈಯಕ್ತಿಕ ಕರೆ ಕೊಂಚ ಬೆರಗು ಹಾಗೂ ಉದ್ವೇಗವನ್ನು ತಂದಿತ್ತು.

"ನಿನ್ನೊಂದಿಗೆ ಸ್ವಲ್ಪ ಮಾತನಾಡುವುದಿದೆ. ನಾಳೆ ಸಂಜೆ ದಯವಿಟ್ಟು ಸಿಗುತ್ತೀಯ..." ತುಂಬಾ ಮೃದುವಾದ ದನಿಯಲ್ಲಿ ದೈನ್ಯದಿಂದ ಕೇಳಿಕೊಂಡಿದ್ದ.

ಆ ಕ್ಷಣದಲ್ಲಿ ಆ ಸಂದರ್ಭವನ್ನು ಹೇಗೆ ನಿಭಾಯಿಸಬೇಕೆಂದು ತೋರದೆ, "ಹ್ಲೂಂ..." ಎಂದು ತಲೆ ಆಡಿಸಿ ಅವನ ಕೋರಿಕೆಯಂತೆ ಮನೆಯ ವಿಳಾಸ ನೀಡಿದಳು.

ಆರು ವರ್ಷಗಳ ಈ ದೀರ್ಘ ಅವಧಿಯಲ್ಲಿ ಪರಸ್ಪರ ಭೇಟಿಯಾಗಿಲ್ಲ, ನೋಡಿಲ್ಲ, ಅಷ್ಟೇ ಅಲ್ಲ, ಮಾತನ್ನೂ ಕೂಡ ಆಡಿರಲಿಲ್ಲ. ಸಣ್ಣ ವಿಷಯವೊಂದಕ್ಕೆ ತನ್ನೊಂದಿಗೆ ಜಗಳವಾಡಿ ಮನೆ ಬಿಟ್ಟು ಹೋಗಿದ್ದ ಶಶಿಧರ. ತಾನೂ ಸ್ವಾಭಿಮಾನಿ. ಅವನಿಗಾಗಿ ಹುಡುಕಾಡಿರಲಿಲ್ಲ.

ಮದುವೆಗೆ ಮುನ್ನ ಪ್ರಣಯ ಹಕ್ಕಿಗಳಾಗಿದ್ದಾಗ ತಾನು ಕಾಲಿನ ಬೆರಳ ತುದಿಯಿಂದ ತೋರಿಸಿದ್ದನ್ನು ತಲೆಮೇಲೆ ಹೊತ್ತುಕೊಳ್ಳುತ್ತಿದ್ದ ಶಶಿಧರ. ಮದುವೆಯಾದ ಮೇಲೆಯೇ ಅವನ ನಿಜ ಸ್ವರೂಪ ಗೊತ್ತಾದದ್ದು! ಪ್ರತಿಯೊಂದು ವಿಷಯದಲ್ಲೂ ಅವನು ಹೇಳಿದಂತೆಯೇ ಕೇಳಬೇಕು. ಅವನ ಇಚ್ಛೆಯಂತೆಯೇ ನಡೆಯಬೇಕು. ಅವನಿಗಾಗಿ ತಾನೂ ಹಾಗೆಯೇ ನಡೆದುಕೊಂಡೆ. ನನ್ನ ಆಸೆಗಳನ್ನು ಅದುಮಿಟ್ಟುಕೊಂಡೆ. ಅವನನ್ನು ಖುಷಿಪಡಿಸಲು ಎಲ್ಲಾ ಅವಮಾನಗಳನ್ನೂ ಸಹಿಸಿಕೊಂಡೆ. ಆದರೆ ದಿನದಿಂದ ದಿನಕ್ಕೆ ಪರಿಸ್ಥಿತಿ ಕೈ ಮೀರತೊಡಗಿತು. ತನಗೂ ಆತ್ಮಾಭಿಮಾನ ಇದೆ. ಒಂದು ದಿನ ಅವನಿಗೆ ತಿರುಗಿಬಿದ್ದೆ. ನನ್ನ ಜೀವನ ನಾನು ನೋಡಿಕೊಳ್ಳುತ್ತೇನೆ ಎಂದೆ. ಮನೆ ಬಿಟ್ಟು ಹೊರಟು ಹೋದ. ಎರಡು ದಿನ ಅವನಿಗಾಗಿ ಕಾದೆ. ಬರಲಿಲ್ಲ. ಅವನ ಆಫೀಸಿಗೆ ಫೋನ್ ಮಾಡಿ ವಿಚಾರಿಸಿದಾಗ ಅಲ್ಲಿಗೂ ಅವನು ಬರುತ್ತಿಲ್ಲವೆಂದು ತಿಳಿಯಿತು.



ಮ.ಸೊ. ಹಾಲಸ್ವಾಮಿ

# ನಿರ್ಧಾರ